(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಗೋಸ್ಕರ ವಿಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ವಿಜಂಟರು ಸವಾಲ್ ಮಾಡುವದಾದರೆ ತಾವು ಯಾರಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿದು ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಜಡಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ವೈಕಿ ಕೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೇ ಮೇರ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್‌ರ ಹಕ್ಕಿಗೆ ಅಪಾಯ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನು ಸರಕಾರದವರು ಬರಖಾಸ್ತುಗಳು ಎಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಕಿಳ್ಳುವ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನು ಜಮಾಯಿಸುವದಕ್ಕಾಗಲಿ ಜಮೀನುಗಳನ್ನು ಇಜಾರೆದಾರನು ಅಗಿಯಕ್ಕೂಡದು. ಒಂದು ವೇಳೆ ಆಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪತ್ತು ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ಹೆಸ್ರಿಲ್ ಕಂಡಾ ಕಾಲ್ಲೂಕು ಅಮಲ್‌ದಾರ್‌ರಿಂದ ಎಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರರು ಸಾಗಿಸಕೂಡದು.

ವಿ. ಎಸ್. ನರಸಿಂಹಯ್ಯಂಗಾರ್,
ಡಿಪ್ಯೂಟಿ ಕಮ್ಮಿಷನರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರನಾಮೆ.

ತಾರೀಖು 8ನೇ ಜೂ॥ 1896.

ಮ್ಯುನಿಸಿಪಲ್ ಕಮ್ಮಿಷನರಾಗಲಿಕ್ಕೆ ಅರಹರೆಂತ 1896ನೇ ಇಸವಿ ಮೇ 28 ಮತ್ತು ಜೂ॥ 4ನೇ ಮರ್ತುಮಿನ ಗೆಜೆಟ್ಟಿನಲ್ಲಿ ಘೋಷಿಸಿ ಮಾಡಿರುವ ಜನಗಳ ವೈಕಿ ಯಾರ್ಯಾರಿಗೆ ಈ ಕೆಲಸಕ್ಕೆ ಕೇರಲೂ ಯಿಷ್ಟವಿರುತ್ತೋ ಅಂಥಾವರು 1891ನೇ ಇಸವಿ ಡಿಸೆಂಬರ್ 3ನೇ ಮರ್ತುಮಿನ ಯಿಲೆಕ್ಷನ್ ರೂಲ್ಸ್ 11ನೇ ಪ್ಯಾರಾ ಅನುಸಾರ, 1896ನೇ ಇಸವಿ ಜೂ॥ 22ನೇ ತಾರೀಖಿನ ಮೊಳಗಾಗಿ ಪ್ರೆಸಿಡೆಂಟರಿಗೆ ಬರದುಕೊಳ್ಳಬೇಕೆಂತ ಅಪೇಕ್ಷಿಸೋಣಾಗಿ ಇದೆ.

ಟಿ. ಟಿ. ಲೆವಾರ್ಡ್,
ಪ್ರೆಸಿಡೆಂಟ್.